<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**MVC 279-24** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 08.05.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 1 ನೇ ಎದುರುದಾರ ಪರ ಶ್ರೀ N K V, ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು, ಅದಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

ರೆಜುಲೇಶನ್ ಪ್ರತಿ ನಿಆರ್ - 1 ಎಂದು ಗುರುತಿಸಲಾಯಿತು.

ಪಾಲಿಸಿ ಪ್ರತಿ ನಿಆರ್ -2 ಎಂದು ಗುರುತಿಸಲಾಯಿತು.

ದೃಢೀಕೃತ ಆರ್ ಸಿ ನಿಆರ್ -3 ಎಂದು ಗುರುತಿಸಲಾಯಿತು.

ಪರ್ಮಿಟ್ ದೃಢೀಕೃತ ಪ್ರತಿ ನಿಆರ್ - 4 ಎಂದು ಗುರುತಿಸಲಾಯಿತು.

ಆನ್ ಲೈನ್ ಡಿ ಎಲ್ ಪ್ರತಿ ನಿಆರ್ - 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರ ಪರ P R B, ವಕೀಲರಿಂದಃ**

ನಮ್ಮ ಇಲಾಖೆಯವರು ಮುಖ್ಯ ವಿಚಾರಣೆಗೆ ಮಾಹಿತಿ ನೀಡಿದ್ದಾರೆ. ವೈಯಕ್ತಿಕವಾಗಿ ಕೇಸಿನ ಬಗ್ಗೆ ಮಾಹಿತಿ ಇಲ್ಲ. ಪೂರ್ಣ ಚಾರ್ಜಶೀಟ ನಮ್ಮ ವಾಹನದ ಮೇಲೆ ಇದೆ ಅಂದರೆ ಸರಿ. ಅಪಘಾತ ದ ಕಾಲಕ್ಕೆ ವಿಮೆ ಹಾಗೂ ಡಿ ಎಲ್ ಚಾಲ್ತಿಯಲ್ಲಿತ್ತು ಅಂದರೆ ಸರಿ. ಪರಸಮಲ್ ರವರ ತಪ್ಪಿನಿಂದ ಅಪಘಾತ ವಾಗಿದೆ ಎಂದು ಚಾರ್ಜಶೀಟದಲ್ಲಿ ಹೇಳಿಲ್ಲ ಅಂದರೆ, ಅವರು ತಪ್ಪು ಹಾಕಿದ್ದಾರೆ ಎಂದು ಹೇಳುತ್ತಾರೆ. ಲಾರಿ ಚಾಲಕ ಹಾಗೂ ಮಾಲಿಕ ಚಾರ್ಜಶೀಟ ತಪ್ಪಾಗಿದೆ ಎಂದು ಯಾರು ದೂರು ನೀಡಿಲ್ಲ. ಚಾಲಕನ ತಪ್ಪಿನಿಂದ ಅಪಘಾತ ವಾಗಿದ್ದರಿಂದ ದೂರು ನೀಡಿಲ್ಲ ಅಂದರೆ ಸರಿಯಲ್ಲ. ಪರಿಹಾರ ಕೊಡಲು ನಾವು ಬಾಧ್ಯಸ್ಥರು ಅಂದರೆ ಸರಿಯಲ್ಲ.

**ಶ್ರೀಮತಿ ಸಿ ಕೆ ವಕೀಲರು ಪಾಟಿ ಸವಾಲು ಇಲ್ಲವೆಂದು ಹೇಳಿದ್ದಾರೆ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.